ಶ್ರೀ ಎಚ್. ಸಿದ್ದವೀರಪ್ಪ —ಮೊದಲು ಅಪಾಯಿಂಟ್ ಆಗಿದ್ದವರ ಪೈಕಿ 47 ಜನ. ಇತ್ತೀಚೆಗೆ ಕೆಲವರು ಅಪಾಯಿಂಟ್ ಆಗಿದ್ದಾರೆ. ಅವರಲ್ಲ ಕೆಲವರನ್ನು ತೆಗೆದು ಹಾಕಿದ ಬಗ್ಗೆ ಆ ರೀತಿ ತಿಳಿಸಲಾಗಿದೆ.

Government have ordered for the appointment of agents for intermediate stations only in the month of November 1952. From that time onwards, very many have been appointed.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ತಮ್ಮ ರೆಜಿಸ್ಟ್ರಿಪ್ರಕಾರ ಅವರು 81 ಜನರಾಗುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಷ್ಟು ಆಗಬಹುದು.

ಶ್ರೀ ಎಸ್. ಗೋಪಾಲಗೌಡ.—ಏಜೆಂಟರುಗಳಿಂದ ಡಿಪಾಜಿಟ್ ತೆಗೆದುಕೊಳ್ಳಬೇಕೆಂಬ ನಿಯಮವನ್ನು ಏನಾದರೂ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಸಾರ್ವೆಸಿ ಸರ್ಟಿಫಿಕೇಟನ್ನು ಕೊಟ್ಟು ಜೊತೆಗೆ 50 ರೂಪಾಯಿಗಳ ಡಿಪಾಜಿಟ್ ಸಹ ಕೊಡಬೇಕೆಂಬ ನಿಯಮವನ್ನೇ ಮಾಡಲಾಗಿದೆ.

ಶ್ರೀ ಎಸ್. ಗೋಪಾಲಗೌಡ. — ಮುನಾಪಲ ರೂಟ್‌ಗಳಲ್ಲಿ ಕೂಡ ಅಂಥಾ ಏಜೆಂಟರಿಗೆ ಅವಶ್ಯಕತೆ ಇದೆಯೇ ?

Mr. SPEAKER.—That question was put already.

Sri K. S. VASAN.—What was the necessity to accept the revised tender with an additional sum of Rs. 453 in the case of Messrs. Simpson & Co. ?

Sri H. SIDDAVEERAPPA.—I have already replied that question. I have already submitted for the consideration of the House the principles involved while accepting a tender.

Sri K. S. VASAN.—If there are certain circumstances for accepting a revised tender, will it go before a Committee for examination or will the Minister himself consider it ?

Sri H. SIDDAVEERAPPA.—Normally it goes before a Committee.

ಶ್ರೀ ಎಸ್. ಎಂ. ಮರಿಯಪ್ಪ.—ತಮ್ಮ ಮುನಾಪಲ ರೂಟ್ಸ್‌ಗಳಲ್ಲಿ ಎಷ್ಟು ಜನ ಟ್ರಾಫಿಕ್ ಸೂಪರ್‌ವೈಜರು ಗಳಿರುತ್ತಾರೆ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಸ್. ಎಂ. ಮರಿಯಪ್ಪ.—ಓವರ್ ರೋಡ್ ಮಾಡಬೇಕೆಂಬುದಾಗಿ ತಾವೇ ಅವರಿಗೆ ಸೂಚನೆ ಕೊಟ್ಟಿದ್ದೀರಾ ?

ಅಧ್ಯಕ್ಷರು.—ಈ ಪ್ರಶ್ನೆಗೆ ನಿನ್ನೆಯ ದಿವಸವೇ ಉತ್ತರ ಕೊಡಲಾಗಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಈಗ ರೋಡ್ ಟ್ರಾಫಿಕ್ ಬಸ್ಸುಗಳಲ್ಲಿ ಜನಸಂಚಾರ ಕಡಮೆಯಾಗುತ್ತಿದೆಯಲ್ಲವೇ ?

ಅಧ್ಯಕ್ಷರು.—ಈ ಪ್ರಶ್ನೆಗೂ ನಿನ್ನೆಯ ದಿವಸವೇ ಉತ್ತರ ಕೊಡಲಾಗಿದೆ.

ಶ್ರೀ ಎಂ. ಲಿಂಗಣ್ಣ.—ಈ ರೋಡ್ ಟ್ರಾನ್ಸ್‌ಪೋರ್ಟ್ ಲೈನಿನಲ್ಲಿ 47 ಬುಕ್ಕಿಂಗ್ ಆಫೀಸುಗಳಿರುತ್ತವೆಯೇ ?

Sri H. SIDDAVEERAPPA.—They may not be having a regular office as such with a board and all that.

ಬಸ್ ಸ್ಟ್ಯಾಂಡಿನಲ್ಲಿ ನಿಂತು ಕೊಂಡಿರುತ್ತಾರೆ ಸರ್ಕಾರಿ ಬಸ್ ಹತ್ತಿ ಎಂದು ಹೇಳುತ್ತಾರೆ.

ಶ್ರೀ ಎಂ. ಲಿಂಗಣ್ಣ.—ಅವರು ಅವರ ಮನೆಗಳ ಹತ್ತಿರದಲ್ಲೇ ಈ ಆಫೀಸುಗಳನ್ನು ಮಾಡಿಕೊಂಡಿದ್ದಾರೋ ಅಥವಾ ಬಸ್‌ಸ್ಟ್ಯಾಂಡಿಗೆ ಬಂದು ಕೆಲಸ ಮಾಡುತ್ತಿದ್ದಾರೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಎರಡು ಕಡೆಗಳಲ್ಲೂ ಕೆಲಸವಾಡುತ್ತಾರೆ.

ಶ್ರೀ ಬಿ. ರಾಚಯ್ಯ.—ಗುಂಡ್ಲುಪೇಜೆಯಿಂದಮೈಸೂರಿಗೆ ಬರತಕ್ಕ ಬಸ್ಸನ್ನು ಮುನಾಪಲುಮಾಡಿಕೊಂಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ರಾಚಯ್ಯ.—ಆ ರೂಟಿನಲ್ಲಿ ಖಾಸಗೀ ಬಸ್ಸಿನವರಿಗೂ ದಿನ ಬಿಟ್ಟು ದಿನ ಬಸ್ಸನ್ನು ಓಡಿಸಲು ಅವಕಾಶ ಕೊಟ್ಟಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಕೊಟ್ಟಿದ್ದೇವೆ.

Expenditure on food control.

Q.—393. Sri G. DUGGAPPA (Holalkere—Scheduled Castes).—

Will the Government be pleased to state :—

(*a*) the total amount of expenditure (with particulars) incurred by the Government towards the food control in the State during the current year and the last year ;

(*b*) whether they received any grant or help from the Centre ;

(*c*) if so, in what form and to which extent ?

A.—Sri H. SIDDAVEERAPPA (Minister for Home and Industries).—

		Current year 1952-53 Rs.	*Last year* 1951-52 Rs.
(*a*)	(i) On Food Subsidy	15,55,000	29,52,486
	(ii) Expenditure on establishment (Budgeted).	32.79,472	37,82,648
(*b*)	.. ..	Nil	Yes
(*c*)	.. ..	Nil	By credits to our account, being subsidy on the subsidised quantity of *supply*. Rs. 66,36,842

ಶ್ರೀ ಜಿ. ದುಗ್ಗಪ್ಪ.—ಫುಡ್ ಕಂಟ್ರೋಲ್ ಡ್ಯೂಟಿ ಮಾಡತಕ್ಕ ಪೋಲೀಸಿನವರನ್ನು ಈ ರೇಷನ್ಡ್ ಪ್ರದೇಶದಲ್ಲಿಯೂ ಮತ್ತು State border ನಲ್ಲಿಯೂ ಡ್ಯೂಟಿಗೆ ನೇಮಿಸಿದ್ದೀರಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಜಿ. ದುಗ್ಗಪ್ಪ.—ಇವರಿಗೆ ವಿಶೇಷ ರೀತಿಯ ಡಿ.ಎ. ಅಥವಾ ಭತ್ಯಗಳನ್ನೇನಾದರೂ ಕೊಡುತ್ತಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ರೂಲ್ಸ ಪ್ರಕಾರ ಕೊಡುತ್ತಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ತಾವು ಇಲ್ಲಿ ಕೊಟ್ಟಿರತಕ್ಕ ಸಿಬ್ಬಂದಿಯ ಪಟ್ಟಿಯಲ್ಲಿ ಈ ಪೋಲೀಸ್ ಇಲಾಖೆಯೂ ಸೇರಿರುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸೇರಿದೆ.

ಶ್ರೀ ಜಿ. ದುಗ್ಗಪ್ಪ.—ಈ ಸ್ಪಾಟ್ಯಚ್ಯುಟರಿ ರೇಷನಿಂಗ್ ಏರಿಯಾದಲ್ಲಿರತಕ್ಕ ಸಿಬ್ಬಂದಿಗೆ ತೋರಿಸಿರತಕ್ಕ ಖರ್ಚಿನಲ್ಲಿ ಯಾವ ಯಾವ ಖರ್ಚಿನ ಐಟಂಗಳು ಸೇರಿವೆ ?

ಶ್ರೀ ಎಚ್. ಸಿದ್ದವೀರಪ್ಪ.—ಅದರಲ್ಲಿ ಸಂಪೂರ್ಣ ಇಲಾಖೆಯ ವೆಚ್ಚಗಳೆಲ್ಲಾ ಸೇರಿರುತ್ತವೆ.

ಶ್ರೀ ಪಿ. ಆರ್. ರಾಮಯ್ಯ.—ತಾವು ಈ ಫುಡ್ ಬಾಬಿನಲ್ಲಿ ತೋರಿಸಿರತಕ್ಕ 37,82,648 ರೂಪಾಯಿಗಳಲ್ಲಿ ಹಂಗಾಮಿ ಸಿಬ್ಬಂದಿಗಾಗಿ ಎಷ್ಟು ಕೊಡಲಾಗುತ್ತದೆ ಮತ್ತು ಇತರ ಇಲಾಖೆಗಳಿಂದ ತೆಗೆದುಕೊಂಡಿರತಕ್ಕ ಖರ್ಚು ಸಿಬ್ಬಂದಿಗಾಗಿ ಎಷ್ಟನ್ನು ಕೊಡಲಾಗುತ್ತಿದೆ ಎಂಬುದನ್ನು ತಿಳಿಸಲು ಸಾಧ್ಯವೇ ?

Sri H. SIDDAVEERAPPA.—I have not got that figure readily available now. If the Hon'ble Member wants, I will furnish him.

Sri P. R. RAMAIAH.—From your memory ?

Sri H. SIDDAVEERAPPA.—I cannot hazard.

ಶ್ರೀ ಯು. ಎಂ. ಮಾದಪ್ಪ.—ಟ್ಯಾಸ್ಮೊರ್ಜ್‌ಕ್ಷೆಷ್ಟಗಾಗಿ ಎಷ್ಟು ಮೊಬಲಗು ಖರ್ಚಾಗಿದೆ ?

Sri H. SIDDAVEERAPPA.—I want notice for that.

ಶ್ರೀ ಬಿ. ಹುಚ್ಚೇಗೌಡ.—ತಾವು 1952—53ಕ್ಕೆ ಕೇಂದ್ರದವರಿಂದ ಯಾವ ಸಬ್‌ಸಿಡಿಯೂ ಬರಲಿಲ್ಲವೆಂದು ತಿಳಿಸಿದ್ದೀರಿ. ಏನುಕಾರಣ ?

Sri H. SIDDAVEERAPPA.—That is the policy of the Central Government. They do not want to subsidise grains.

ಶ್ರೀ ಬಿ. ಹುಚ್ಚೇಗೌಡ.—1949—50ರಲ್ಲಿ ನಾವು ಈ ಆಹಾರದ ಬಗ್ಗೆ ಒಂದು All-India Pool ಗೆ ಸೇರಿಕೊಂಡಿದ್ದೇವೆ, ಇದರಿಂದ ಕೇಂದ್ರದವರು ನಮಗೆ ವರ್ಷಂ ಪ್ರತಿ ಸಬ್‌ಸಿಡಿಕೊಡುತ್ತಾರೆ, ಎಂದು ತಿಳಿಸಿದ್ದೀರಿ. ಈಗ ಅವರು ಕೊಡದೆ ಇರಲು ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಕೊಡುವುದಿಲ್ಲವೆಂದು ಹೇಳಿಲ್ಲ. ಅವರು ಒಂದು All-India Policy ಅನುಸರಿಸುತ್ತಿದ್ದಾರೆ ಎಲ್ಲ ಸ್ಟೇಟುಗಳವರಿಗೂ ಅದು ಅನ್ವಯಿಸುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಆಗ ಏತಕ್ಕಾಗಿ ಅವರು ಕೊಡುತ್ತಿದ್ದರು ? ಈಗ ಏತಕ್ಕಾಗಿ ಹಾಗೆ ಅವರು ಕೊಡುತ್ತಿಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ಮೈಲೋ ಮತ್ತು ಗೋಧಿಗಳ ಬಗ್ಗೆ 1951—52ರಲ್ಲಿ ಅವರು ಸಬ್‌ಸಿಡಿ ಕೊಟ್ಟಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—1952—53ರಲ್ಲಿ ಅದೇ ರೀತಿ ಅವರು ಸಬ್‌ಸಿಡಿ ಕೊಟ್ಟಿದ್ದಾರೇನು ?

Sri H. SIDDAVEERAPPA.—Even then they were giving a subsidy of Rs. 5 per maund, roughly Rs. 15 per palla. 1951—52ರಲ್ಲಿ ನಮಗೆ 15 ರೂಪಾಯಿಗಳಿಗೆ ಒಂದು ಪಲ್ಲದಂತೆ ನರಬರಾಯಿ ಮಾಡಿದ್ದಾರೆ. 1953ಕ್ಕೆ ಇನ್ನೂ ಅವರು ಧಾರಣೆಯನ್ನು ತಿಳಿಸಿಲ್ಲ. 1952ರಲ್ಲಿ ಅವರು ನಮಗೆ ಕೊಟ್ಟರತಕ್ಕ ದರ 11 ರೂಪಾಯಿಗಳಿದ್ದರೂ ಅವರಿಗೆ landed cost 16 ರೂಪಾಯಿ ಬಿದ್ದಿರುತ್ತದೆ. Over and above that, they were giving 75 per cent of the subsidy to us for some time, then on a graduated scale for some time—for three years it continued.

ಶ್ರೀ ಬಿ. ಹುಚ್ಚೇಗೌಡ.—ಈ ಸಬ್‌ಸಿಡಿಕೊಡತಕ್ಕ ಪಾಲಿಸಿಯನ್ನು ಯಾವ ಆಧಾರಗಳ ಮೇಲೆ ಬದಲಾವಣೆ ಮಾಡುತ್ತಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ವರ್ಷೇ ವರ್ಷೇ ಅದನ್ನು ಬದಲಾಯಿಸುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಹಾಗೆ ಪ್ರತಿ ವರ್ಷವೂ ಏಕೆ ಬದಲಾವಣೆ ಮಾಡುತ್ತಾರೆ?

ಅಧ್ಯಕ್ಷರು.—ವರ್ಷ ವರ್ಷವೂ ಪರಿಸ್ಥಿತಿಗಳು ಬದಲಾವಣೆಯಾಗುವುದರಿಂದ ಅವುಗಳನ್ನು ಬದಲಾವಣೆ ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಯಾವ ಆಧಾರದ ಮೇಲೆ?

Mr. SPEAKER.—The Hon'ble Minister does not know. It is the Government of India that allots.

ಶ್ರೀ ಬಿ. ಹುಚ್ಚೇಗೌಡ.—51ನೆಯ ಇನವಿಯಲ್ಲಿ ಕೊಟ್ಟಿದ್ದಾರೆ. ನಾವು All-India Poolನ ಪಾಲಿಸಿಗೆ ಒಪ್ಪಿಕೊಂಡಿದ್ದೇವೆ. ಅದರಿಂದ ಅಷ್ಟೊಂದು ಅನುಕೂಲ ಬರುತ್ತದೆಂದು ಉದ್ದುದ್ದ ಭಾಷಣಮಾಡಿ ಈ ದಿವಸ ಅವರು ಸಬ್‌ಸಿಡಿಕೊಡುವುದಿಲ್ಲವೆಂದು ಹೇಳಲು ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.— ನಾನು ಆ ರೀತಿಯೇನೂ ಹೇಳಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಅವರು ಅದನ್ನು ಕೊಡದಿರುವುದಕ್ಕೆ ಕಾರಣವೇನು ?

Sri H. SIDDAVEERAPPA.—They have said that it is not right to go on subsidising foodgrains, and that the States must be able to maintain their food policy through service at cost.

12-30 P.M.

Sri B. HUTCHE GOWDA.—Are you free to have your own policy in regard to the distribution of food-grains ?

Sri H. SIDDAVEERAPPA.—To the limited extent to which we are allowed under the Essential Supplies Act.

ಶ್ರೀ ಬಿ. ಹುಚ್ಚೇಗೌಡ —ಹಾಗಾದರೆ ಈ ವರ್ಷವೂ ಅಂದರೆ 1953–54ಕ್ಕೂ ಇದೇ ರೀತಿ ಈ ಇರಾಖೆಯನ್ನು maintain ಮಾಡುತ್ತೀರಾ?

ಶ್ರೀ ಎಚ್. ಸಿದ್ಧವೀರಪ್ಪ.—ಕಡಮೆಯಾಗುತ್ತಿರುವುದು 1953—54ನೆಯ ಸಾಲಿನ ಬಡ್ಜೆಟ್ ನೋಡಿದರೇ ಗೊತ್ತಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ತಾವು 32 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಡಿ–ಕಂಚೊರ್ ಆದ ಮೇಲೆಯೂ ಇಷ್ಟು ಕೊಡುವುದರ ಅವಶ್ಯಕತೆಯಿದೆಯೇ!

Sri H. SIDDAVEERAPPA.—We will examine it and it is the policy of the Government to reduce it to the irreducible minimum.

ಶ್ರೀ ಬಿ. ನಾರಾಯಣಸ್ವಾಮಿ.—ಇಲ್ಲಿ food subsidy 15 ಲಕ್ಷ ರೂಪಾಯಿಗಳೆಂದು ಹೇಳಿದ್ದೀರಿ. ಇದರಲ್ಲಿ rural parts ಗೆ ಎಷ್ಟು ಕೊಡುತ್ತೀರಿ, ಪಟ್ಟಣ ಪ್ರದೇಶಗಳಿಗೆ ಎಷ್ಟು ಕೊಡುತ್ತೀರಿ ?

(ಉತ್ತರವಿಲ್ಲ)

Mr. SPEAKER.—Next question No. 11.

Sri H. SIDDAVEERAPPA.—Before that, I would like to make a statement. Day before yesterday I made a small mis-statement that the General Manager is a man from the I.A.S. He is not so. I should like to be corrected.

Latest Agreement between the Kolar Gold Mining Company and the Mysore Government.

Q.—11. Sri R. K. PRASAD (Bangarpet).—

Will the Government be pleased to state :—

(*a*) when the latest agreement was effected between the K.G.F. Gold Mining Company and the State of Mysore;

(*b*) whether all the clauses have come into force;

(*c*) the clauses that have not been given effect to and the reason for the same;

(*d*) the amount of income to the Government by way of gold duty and other sources to the State before the latest agreement was executed (year-war details for five years to be furnished) ;

(*e*) the present income from the Gold Mining Company after the present agreement was effected (year-war details to be furnished) ?

A.—Sri A. G. RAMACHANDRA RAO (Minister for Law and Education) [on behalf of SRI K. HANUMANTHAIYA (Chief Minister)].—

(*a*) 20th February 1949.

(*b*) Yes.

(*c*) All the clauses have been given effect to, but whether they have been implemented to the degree expected is under examination.

(*d*) and (*e*) Statements appended below :—